
## ಗಾಳಿಯ ಮಡಿಲು




ಬದುಕಿನ ವಿರೋಧಾಭಾಸಗಳನ್ನು ಹಿಡಿದಿಡಲು ಕಾವ್ಯ ಅತ್ಯುತ್ತಮ ಮಾಧ್ಯಮ ಎನ್ನುವುದಕ್ಕೆ ನಿದರ್ಶನದಂತಿವೆ 'ಗಾಳಿಯ ಮಡಿಲು' ಸಂಕಲನದ ಹಲವು ಕವಿತೆಗಳು. ವೃತ್ತಿಯಿಂದ ಪತ್ರಕರ್ತರಾಗಿರುವ ಸಿದ್ದು, 'ಕನಸ ಬೆನ್ನತ್ತಿ ನಡಿಗೆ' ಸಂಕಲನದ ಕವಿತೆಗಳ ಮೂಲಕ ಸಹೃದಯರಿಗೆ ಪರಿಚಿತರು.

ನಮಗೆ ಭೂಮಿಯ ಮಡಿಲು ಪರಿಚಿತ. ಇಲ್ಲಿನ ಕವಿ ಕಾಣಿಸುತ್ತಿರುವುದು ಗಾಳಿಯ ಮಡಿಲನ್ನು. ಭೂಮಿಯ ಅಪ್ಪುಗೆಗೆ ಹಾತೊರೆದ ಹಣ್ಣೆಲೆಯೊಂದು ಮರದಿಂದ ಉದುರಿ ಮಣ್ಣು ಸೇರುತ್ತದೆ. ಹಣ್ಣೆಲೆಯ ನಡೆ ಚಿಗುರೆಲೆಗಳಿಗೆ ಆತ್ಮಹತ್ಯೆಯಂತೆ ಕಾಣಿಸುತ್ತದೆ. ಕೆಳಗೆ ದಿಟ್ಟಿಸುವ ಗಾಳಿಗೆ, ನೆಲವನ್ನು ಮೈಯೆಲ್ಲ ಹರಿದುಹೋಗುವಂತೆ ಮತ್ತೆ ಮತ್ತೆ ಚುಂಬಿಸುತ್ತಿರುವ ಮುದಿ ಎಲೆ ಕಾಣಿಸುತ್ತದೆ. ಆಗ ಗಾಳಿ ಮೆತ್ತಗೆ ಬೀಸುತ್ತದೆ; ಹಣ್ಣೆಲೆ ಗಾಳಿಯ ಮಡಿಲು ಸೇರುತ್ತದೆ.

ಬದುಕಿನ ದ್ವಂದ್ವಗಳು, ಸುಖದ ಹುಡುಕಾಟ ಮತ್ತು ಅದರ ನಿರರ್ಥಕತೆಯನ್ನು ಇಲ್ಲಿನ ಕವಿತೆಗಳು ಬೇರೆ ಬೇರೆ ನೆಲೆಗಳಲ್ಲಿ ಶೋಧಿಸುತ್ತವೆ. 'ಹಾಳೆ ಮತ್ತು ಕವಿ' ರಚನೆ ಗಮನಿಸಿ. ಕವಿತೆ ಬರೆಯಲು ಸೋಲುವ ಕವಿ, ಹಾಳೆಗಳನ್ನು ಹರಿದು ಎಸೆದಾಗ, 'ದುಃಖ ಅವನಿಗಾದರೆ ನಾವ್ಯಾಕೆ ಹೀಗೆ ಸಾಯಬೇಕು' ಎಂದು ಡಸ್ಟ್‌ಬಿನ್‌ನಲ್ಲಿ ಕವಿತೆಗಳು ಚೀರುತ್ತವೆ. ಯಾರ ನೋವು ಕನಿಷ್ಠವಲ್ಲ ಎನ್ನುವ ತಿಳಿವಳಿಕೆಯನ್ನು ತಾನೇ ಕಾವ್ಯ ಕರುಣಿಸಬೇಕು. ಈ ಅರಿವು 'ಕತ್ತಿಯ ಬಿಕ್ಕು' ಕವಿತೆಯಲ್ಲೂ ಇದೆ. 'ಹಾದಿಗುಂಟ / ಕತ್ತಿಯಂಚಿನಿಂದ ತೊಟ್ಟಿಕ್ಕಿದ್ದನ್ನು ರಕ್ತ / ಅಂದವರೇ? / ಒರೆಯೊಳಗಿಂದಲೇ ಹಲುಬಿತು ಹತಾರ / 'ಅವರಿಗೇನು ಗೊತ್ತು ಅತ್ತದ್ದು, ಬಿಕ್ಕಿದ್ದು?' – ಕವಿಯಷ್ಟೇ ಕತ್ತಿ ಬಿಕ್ಕುವುದನ್ನೂ ಕೇಳಿಸಿಕೊಳ್ಳಬಲ್ಲ.

ಮನುಷ್ಯನೊಳಗಿನ ನೂರೆಂಟು ವಿಕಾರಗಳಿಗೆ 'ಕನ್ನಡಿಯ ಸಾವು' ಕನ್ನಡಿ ಹಿಡಿಯುವ ಪ್ರಯತ್ನ ಮಾಡುತ್ತದೆ. 'ನೂರೆಂಟು ವಿಧದಲಿ ವಿಕಾರವಾಗಿ ಸತ್ತಿರುವೆ – ಉತ್ತರ ಹೇಳಲು ಕನ್ನಡಿಯೊಂದು ನೂರೆಂಟು ಚೂರುಗಳಾಗಿ ಸಾಯಬೇಕಾಯಿತು'. ಕಾಣಿಸುವ ಗುಣದ ಕನ್ನಡಿಯೂ ಮನುಷ್ಯನ ವಿಕಾರಗಳೆದುರು ಸೋಲುವ ವಿಪರ್ಯಾಸವನ್ನು ತಣ್ಣಗೆ ಚಿತ್ರಿಸುವ ಈ ಕವಿತೆ, ನಮ್ಮೊಳಗಿನ ಕನ್ನಡಿಗಳ ಜತನವಾರಿಸಿಕೊಳ್ಳಲು ನೆನಪಿಸುತ್ತದೆ.

ಭಾಷೆಯ ಬಳಕೆಯ ಬಗೆಗಿನ ಕವಿಯ ಎಚ್ಚರ ಹಾಗೂ ಬರೆದ ಸಾಲುಗಳ ಜೊತೆಗೆ, ಬರೆಯದೆ ಉಳಿದ ಸಾಲುಗಳ ಬಗೆಗೂ ಕವಿಗಿರುವ ನಂಬಿಕೆ ಅಚ್ಚರಿಹುಟ್ಟಿಸುವಂತಿದೆ.

ಲೇ: ಸಿದ್ದು ಸತ್ಯಣ್ಣವರ; ಪು: 64; ಬೆ: ₹. 60, ಪ್ರ: ಪಲ್ಲವ ಪ್ರಕಾಶನ, ಹೊಸಪೇಟೆ.
ಫೋನ್: 9632338494